ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಸುಪ್ರೀಂ ಕೋರ್ಟ್‌ನ ನೆಪ ಹೇಳಿಕೊಂಡು corruption ಜಾಸ್ತಿ ಆಗುತ್ತಿದೆ ಮತ್ತೆ ಗ್ರಾಹಕರಿಗೆ ಮರಳು ಸಿಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಅದು ನೆಪ ಅಲ್ಲ. ಅದು ಸತ್ಯ.

ಉಪಾಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೇ, ನಾಳೆ ಅವಕಾಶ ಕೊಡುತ್ತೇನೆ. ಆಗ detail ಆಗಿ ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಆಯಿತು.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ನಿಲುವಳಿ ಸೂಚನೆ ಇದೆ.

ಉಪಾಧ್ಯಕ್ಷರು: ಮಾನ್ಯ ದತ್ತಾರವರೇ, ಇದು ಬರುವುದಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಮೂರು ದಿನದ ಕೆಳಗೆ ನನ್ನ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯೊಳಗಡೆ ಸಂಜೆ 7.00 ಗಂಟೆಗೆ 9ನೇ ತರಗತಿಯಲ್ಲಿ ಓದುತ್ತಿದ್ದ 15 ವರ್ಷದ ಹುಡುಗ..

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡುತ್ತಾರೆಂದರೆ ಹೇಗೆ? ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಉಪಾಧ್ಯಕ್ಷರು: ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಆದ್ದರಿಂದ, ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಉಪಾಧ್ಯಕ್ಷರೆ, ಆ ಹುಡುಗ ಅನುಮಾನಾಸ್ಪದವಾಗಿ ಸತ್ತಿದ್ದಾನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಷಯವನ್ನು ತಂದಿದ್ದಾರೆ. ಎರಡನೆಯದಾಗಿ ತಾವು ತಂದಿದ್ದೀರಿ. ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನಮ್ಮದೇನು ಅಭ್ಯಂತರ ಇಲ್ಲ.

ಉಪಾಧ್ಯಕ್ಷರು: ಇದು ಬರುವುದಿಲ್ಲ ಇದನ್ನು ತಿರಸ್ಕರಿಸಲಾಗಿದೆ. ಬೇರೆ ರೂಪದಲ್ಲಿ ತನ್ನಿ ಅವಕಾಶ ಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ: ಬೇರೆ ರೂಪ ಎಂದರೆ ಯಾವ ರೂಪದಲ್ಲಿ ತರಬೇಕೆಂದು ಹೇಳಿ. ಇದು ಮೊನ್ನೆದಿವಸ ನಡೆದಿರುವ ಘಟನೆಯಾಗಿದೆ. ಪೋಷಕರು ಅಲ್ಲಿ ಹೆಣ ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ.

ಉಪಾಧ್ಯಕ್ಷರು: ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ.

ಶ್ರೀ ವೈ.ಎಸ್.ವಿ. ದತ್ತಾ: ಹಾಗಾದರೆ, ಶೂನ್ಯ ವೇಳೆಗೆ convert ಮಾಡಿ.

ಉಪಾಧ್ಯಕ್ಷರು: ಇದು ನಿಲುವಳಿ ಸೂಚನೆಗೂ ಸಹ ಬರುವುದಿಲ್ಲ ಹಾಗೆಯೇ ಅದನ್ನು convert ಮಾಡುವುದಕ್ಕೂ ಸಹ ಬರುವುದಿಲ್ಲ. ಆದ್ದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಮತ್ತೊಂದು notice ಕೊಡಿ.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ notice ಕೊಟ್ಟಿದ್ದೇನೆ. ಅದನ್ನು convert ಮಾಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ನಿಲುವಳಿ ಸೂಚನೆಗೆ ಕೊಟ್ಟಿದ್ದನ್ನು ಶೂನ್ಯವೇಳೆಗೆ convert ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಇನ್ನೊಂದು notice ಕೊಡಿ.

ಉಪಾಧ್ಯಕ್ಷರು: ಮಾನ್ಯ ಪ್ರಸನ್ನ ಕುಮಾರ್‌ರವರೇ, ತಾವು ಮುಂದುವರಿಸಿ.

ಶ್ರೀ ಕೆ.ಬಿ. ಪ್ರಸನ್ನ ಕುಮಾರ್ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಆ ಒಂದು ಪ್ರದೇಶದಲ್ಲಿ Planetarium ಅನ್ನು ನಿರ್ಮಾಣ ಮಾಡಿ ನಾಗರೀಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅದರ ಸೌಲಭ್ಯವನ್ನು ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಅಲ್ಲಿನ ನಾಗರೀಕರ ಪರವಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆಯನ್ನು ಮಾಡುತ್ತೇನೆ. ಅದೇ ರೀತಿಯಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 50 ಸಾವಿರಕ್ಕಿಂಥ ಹೆಚ್ಚು ಕಾರ್ಮಿಕ ಬಂಧುಗಳಿದ್ದಾರೆ. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯದಲ್ಲಿ ವ್ಯತ್ಯಾಸವಾದಾಗ ESI ಆಸ್ಪತ್ರೆಯ ಒಂದು ವ್ಯವಸ್ಥೆ ಆಗಬೇಕಾಗಿದೆ. ಆದ್ದರಿಂದ, ಅತಿ ಜರೂರಾಗಿ ಒಂದು ESI ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಇವತ್ತಿನದಿವಸ ನಮ್ಮ ನಗರ ಬೆಳೆಯುತ್ತಿದ್ದ ಹಾಗೆ ವಾಹನಗಳ ದಟ್ಟಣೆ ಅತಿ ಹೆಚ್ಚಾಗಿದೆ. ಆದ್ದರಿಂದ, ಅಲ್ಲಿರುವ ಮೂರ್ನಾಲ್ಕು ಮುಖ್ಯ ರಸ್ತೆಗಳನ್ನು ಅಂದರೆ, ಜೈಲ ರಸ್ತೆ, ಮಿಳಘಟ್ಟ ರಸ್ತೆ, ದುರ್ಗಿಗುಡಿ ರಸ್ತೆಗಳನ್ನು ಅಗಲೀಕರಣ ಮಾಡತಕ್ಕಂಥದ್ದು ಅತ್ಯಾವಶ್ಯಕತೆ ಇದೆ. ಆದ್ದರಿಂದ, ಈ ರಸ್ತೆಗಳ ಅಗಲೀಕರಣಕ್ಕೆ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ನಮ್ಮ ನಗರದಲ್ಲಿ ಮಹಿಳಾ ಪಾಲಿಟೆಕ್ನಿಕ್ ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ. ಜಿಲ್ಲೆಯಲ್ಲಿ ಇದರಿಂದ ಹಲವಾರು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ಈ ಪ್ರದೇಶ ತುಂಬಾ ದೊಡ್ಡದಾಗಿದ್ದು ಈ ಪ್ರದೇಶದಲ್ಲಿ ಒಂದು ಮಹಿಳಾ ಇಂಜಿನಿಯರಿಂಗ್ ಕಾಲೇಜ್ ಅನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ನಮ್ಮ ನಗರದಲ್ಲಿ Automobile ಉದ್ಯಮ ಕೂಡ ಬಹಳ ವ್ಯಾಪಕವಾಗಿ ಬೆಳೆದಿದೆ. ಈಗಾಗಲೇ ಅಲ್ಲೊಂದು auto complex ಇದ್ದು ನಮ್ಮ